**ದಿನಾಂಕ 15.09.2021 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಜೆ.ಜೈನ್ ವಕೀಲರಿಂದ ಎದುರುದಾರ 1 ರಿಂದ 5 ರವರ ಪರವಾಗಿಃ**

12. ಎದುರುದಾರ 1 ಇವರ ಹೆಂಡತಿ ರತ್ನಮ್ಮ ದಾಖಲು ಮಾಡಿದ ಒ.ಎಸ್.46/2010 ರಲ್ಲಿ ನಾನು ಪ್ರತಿವಾದಿ 22 ಆಗಿರುತ್ತೇನೆ ಎನ್ನುವುದು ನಿಜ. ಆ ಕೇಸು ಇನ್ನೂ ಚಾಲ್ತಿ ಇದೆ ಎನ್ನುವುದು ನಿಜ. ಒ.ಎಸ್ 46/2010 ಕೇಸಲ್ಲಿ ಎದುರುದಾರ 6 ಮಾರ್ಗರೇಟ್ ಪ್ರತಿವಾದಿ ನಂ. 25 ಆಗಿರುತ್ತಾರೆ ಎನ್ನುವುದು ನಿಜ. ಆರ್.ಎಫ್.ಎ 2173/2018 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಾನು ಎದುರುದಾರ ಆಗಿರುತ್ತೇನೆ ಎನ್ನುವುದು ನಿಜ. ಅದರ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎನ್ನುವುದು ನಿಜ. ದಿನಾಂಕ 22.07.2000 ರಂದು ಬರೆದುಕೊಂಡ ನಿಡಿ.18 ಕ್ರಯಪತ್ರ ಓದಿರುತ್ತೇನೆ. ಆ ಕ್ರಯಪತ್ರದಲ್ಲಿ ಆಸ್ತಿ ಎದುರುದಾರ 10 ಪಶುಪತಿ ಇವರ ಪಿತ್ರಾರ್ಜಿತ ಆಸ್ತಿ ಅಂತ ಬರೆದಿದ್ದಾರೆ ಎನ್ನುವುದು ನಿಜ. ನಮ್ಮ ತಂದೆ ನಮಗೆ ದಾನಪತ್ರ ಬರೆದುಕೊಡುವ ಕಾಲಕ್ಕೆ ನಾನು ಎ.ಚೌಡಯ್ಯ ಇವರ ವಂಶವೃಕ್ಷ ಪಡೆದಿರುವುದಿಲ್ಲ . ಅದೇ ರೀತಿ ನಮ್ಮ ತಂದೆ ಕೆಂಪೇಗೌಡ ಇವರು ದಿನಾಂಕ 26.12.2000 ರಂದು ಕ್ರಯ ಪತ್ರ ಮಾಡಿಸಿಕೊಳ್ಳುವ ಕಾಲಕ್ಕೆ ಎ.ಚೌಡಯ್ಯ ಇವರ ವಂಶವೃಕ್ಷ ಪಡೆದಿದ್ದರೋ ಹೇಗೋ ನನಗೆ ಗೊತ್ತಿಲ್ಲ. ಎ.ಚೌಡಯ್ಯ ಇವರಿಗೆ ಎಷ್ಟು ಜನ ಮಕ್ಕಳು ಅನ್ನುವುದು ನನಗೆ ಗೊತ್ತಿಲ್ಲ.

13. ನಮ್ಮ ತಂದೆ ಕ್ರಯ ಪತ್ರ ಮಾಡಿಸಿಕೊಳ್ಳುವ ಕಾಲಕ್ಕೆ ಎದುರುದಾರ 10 ಪಶುಪತಿ, ಪುಟ್ಟಸ್ವಾಮಿ ಇವರ ಕುಟುಂಬದ ವಂಶವೃಕ್ಷ ಕೂಡಲು ಕೇಳಿದ್ದರೋ ಹೇಗೋ ನನಗೆ ಗೊತ್ತಿಲ್ಲ. ಅಂದರೆ ಎ.ಚೌಡಯ್ಯ ಇವರ ಕುಟುಂಬದ ವಂಶವೃಕ್ಷವನ್ನು ನಾವು 2000 ರಲ್ಲಿ ಕೇಳಿ ಪಡೆದಿರುವುದಿಲ್ಲ. ಎದುರುದಾರ 10 ಇವರ ತಂದೆಯ ಹೆಸರು ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ. ಸದರಿ ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಇವರಿಗೆ ಎಷ್ಟು ಜನ ಹೆಂಡತಿಯರು ಎನ್ನುವುದು ನನಗೆ ಗೊತ್ತಿಲ್ಲ. ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಇವರಿಗೆ ಎಷ್ಟು ಜನ ಮಕ್ಕಳು ಎನ್ನುವುದು ನನಗೆ ಗೊತ್ತಿಲ್ಲ. ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಇವರಿಗೆ 3 ಜನ ಮಕ್ಕಳು, ಅವರ ಹೆಸರು 1. ಪಶುಪತಿ, 2. ರತ್ನಮ್ಮ, 3. ಪುಟ್ಟತಾಯಮ್ಮ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ತಂದೆ ಕ್ರಯಪತ್ರ ಮಾಡಿಸಿಕೊಳ್ಳುವ ಕಾಲಕ್ಕೆ ಎದುರುದಾರ 10 ಪಶುಪತಿ ಕುಟುಂಬದವರನ್ನು ಬೇಟಿಯಾಗಿ ಸದಸ್ಯರ ಬಗ್ಗೆ ವಿಚಾರಿಸಿದ್ದಾರೋ ಹೇಗೋ ನನಗೆ ಗೊತ್ತಿಲ್ಲ. ನಾವು ಮಂಡ್ಯ ಸ್ವರ್ಣಸಂದ್ರದಲ್ಲಿ ವಾಸವಾಗಿದ್ದೇವೆ. ನಮ್ಮ ಮನೆಯಿಂದ ಉಮ್ಮಡಹಳ್ಳಿ ಗ್ರಾಮ ಒಂದುವರೆ ಕಿ.ಮಿ ದೂರ ಆಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಈ ಕೇಸು ದಾಖಲಾದ ನಂತರ ನಾನು ಎದುರುದಾರ 10 ಎ, ಬಿ, ಸಿ, ಡಿ ಇವರನ್ನು ಬೇಟಿಯಾಗಿರುವುದಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೇ ನಂ.131 ಇದು ಎ.ಚೌಡಯ್ಯ ಇವರಿಗೆ ಹೇಗೆ ಬಂತು ಎನ್ನುವುದು ನನಗೆ ಗೊತ್ತಿಲ್ಲ. ಮೂಲ ಸರ್ವೆ ನಂ.131 ಇದು ಮೂಲತಃ ಯಾರಿಗೆ ಸೇರಿದ್ದು ಅನ್ನುವುದರ ಬಗ್ಗೆ ನಾನು ದಾಖಲೆ ಸಂಗ್ರಹಿಸಿರುವುದಿಲ್ಲ.

14. ನಮ್ಮ ತಂದೆ ಕೆಂಪೆಗೌಡ 2000 ರಲ್ಲಿ ಕ್ರಯಪತ್ರ ಮಾಡಿಕೊಳ್ಳುವ ಕಾಲಕ್ಕೆ ಪೇಪರ್ ಪ್ರಕಟಣೆ ಕೊಟ್ಟಿರುವುದಿಲ್ಲ. ನಮ್ಮ ಆಸ್ತಿ ಸೈಟ್ ನಂ.98 ಸರ್ವೆ ನಂ.131 ರಲ್ಲಿಯ ಕ್ರಯಪತ್ರಕ್ಕೆ ಎದುರುದಾರ 1 ರಿಂದ 5 ಸಹಿ ಮಾಡಿರುವುದಿಲ್ಲ. ಅದೇ ರೀತಿ ಸದರಿ ಸೈಟ್ ನಂ.98 ಆಸ್ತಿಗೆ ಸಂಬಂಧಪಟ್ಟ ಹಾಗೆ ಎದುರುದಾರ 1 ರಿಂದ 5 ರವರು ನಮ್ಮ ತಂದೆ ಕೆಂಪೆಗೌಡ ಹೆಸರಿನಲ್ಲಿ ಯಾವುದೇ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ. ಸೈಟ್ ನಂ.98 ಇದು ಸರ್ವೆ ನಂ.131 ರಲ್ಲಿ ಇರುತ್ತದೆ. ಎದುರುದಾರ 1 ಇವರ ಹೆಂಡತಿ ರತ್ನಮ್ಮ, ಎದುರುದಾರ 5 ಪುಟ್ಟತಾಯಮ್ಮ ಇವರಿಗೆ ಸೇರಿದ ಆಸ್ತಿಯಲ್ಲಿ ನಮಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ. ಸರ್ವೆ ನಂ.131 ರಲ್ಲಿ ಎದುರುದಾರ 1 ಇವರ ಹೆಂಡತಿ ರತ್ನಮ್ಮ, ಎದುರುದಾರ 5 ಪುಟ್ಟತಾಯಮ್ಮ ಇವರಿಗೆ ಹಕ್ಕು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಎದುರುದಾರ 1 ರಿಂದ 5 ಇವರಿಗೆ ಕೂಡ ಸರ್ವೆ ನಂ.131 ಕ್ಕೆ ಸಂಬಂಧಿಸಿದ ಪರಿಹಾರ ಹಣ ಬರಬೇಕಾಗಿದೆ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ನಮಗೂ ಪರಿಹಾರ ಹಣ ಬರಬೇಕು ಅಂತ ಉತ್ತರಿಸಿರುತ್ತಾನೆ.

15. ಎದುರುದಾರ 10(ಬಿ) ಚೇತನ್ ನಮ್ಮ ಜೊತೆಗೆ ಚೆನ್ನಾಗಿದ್ದಾನೆ, ಬೇಟಿಯಾದಾಗ ಮಾತನಾಡುತ್ತಾನೆ. ಆರ್.ಡಬ್ಲ್ಯು 2 ಚೇತನ ಇವರು ಸಾಕ್ಷಿ ಏನೇನು ಹೇಳಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಎದುರುದಾರ 1 ರಿಂದ 5 ಇವರು ಸಲ್ಲಿಸಿದ ತಕರಾರು ಬಗ್ಗೆ ನಾನು ಎದುರುದಾರ 10 (ಬಿ) ಚೇತನ್ ಜೊತೆಗೆ ಮಾತನಾಡಿ ವಿಚಾರಿಸಿರುವುದಿಲ್ಲ. ಎದುರುದಾರ 1 ರಿಂದ 5 ಇವರು ದಾಖಲು ಮಾಡಿದ ತಕರಾರು ಬಗ್ಗೆ ಎದುರುದಾರ 10(ಬಿ) ಚೇತನ್ ಜೊತೆಗೆ ಮಾತನಾಡಿಸಿ ವಿಚಾರಿಸಲು ನನಗೆ ತೊಂದರೆ ಇರಲಿಲ್ಲ. ರೂ.1,80,56,200/- ಹಣ ಇದು ಯಾವ ಸರ್ವೆ ನಂ. ಆಸ್ತಿಗೆ ಸಂಬಂದಿಸಿದ್ದು ಎನ್ನುವುದು ನನಗೆ ಗೊತ್ತಿಲ್ಲ. ರೂ.1,80,56,200/- ಹಣಕ್ಕೆ ಸಂಬಂಧಿಸಿದ ಆಸ್ತಿಯ ನಕಾಶೆಯನ್ನು ಅರ್ಜಿದಾರ ಎಸ್.ಎಲ್.ಎ.ಒ ತಯಾರು ಮಾಡಿದ್ದನ್ನು ನಾನು ನೋಡಿರುತ್ತೇನೆ. ಸರ್ವೆ ನಂ.131 ರಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಸಂಬಂದಪಟ್ಟ ರೂ.1,80,56,200/- ಹಣಕ್ಕೆ ನಮಗೆ ಸಂಬಂಧ ಇರುವುದಿಲ್ಲ. ನಾನು ಎದುರುದಾರ 10(ಎ) ಶಾಂತಮ್ಮ, 10(ಬಿ) ಚೇತನ್ , 10(ಸಿ) ಶ್ವೇತ, 10(ಡಿ) ಪಲ್ಲವಿ, ಎದುರುದಾರ 6 ಮಾರ್ಗರೇಟ್ , ಎದುರುದಾರ 8 ರೂಪ ವಿಲ್ಸನ್ ನಮ್ಮ ಜೊತೆಗೆ ಚೆನ್ನಾಗಿದ್ದಾರೆ ಎನ್ನುವುದು ನಿಜ. ನಾವು ಎದುರುದಾರ 10(ಎ), (ಬಿ), (ಸಿ),(ಡಿ), 6, 8 ಇವರ ಜೊತೆಗೆ ಶಾಮೀಲಾಗಿ ಎದುರುದಾರ 1 ರಿಂದ 5 ರವರಿಗೆ ಸೇರಬೇಕಾದ ಹಣವನ್ನು ಲಪಾಟಾಯಿಸಲು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅದೇ ರೀತಿ ಸುಳ್ಳು ದಾಖಲೆ ಸೃಷ್ಟಿ ಮಾಡಿ ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

16. ಎದುರುದಾರ 10 ಪಶುಪತಿ ಇವರಿಗೆ ಸರ್ವೆ ನಂ.131 ರಲ್ಲಿ ಆಸ್ತಿ ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎನ್ನುವುದು ಸುಳ್ಳು. ಅದೇ ರೀತಿ ರಾಮಕೃಷ್ಣ ಇವರು ನಮ್ಮ ತಂದೆ ಕೆಂಪೇಗೌಡರಿಗೆ 2000 ಇಸವಿಯಲ್ಲಿ ಸೈಟ್ ನಂ.98 ಮಾರಾಟ ಮಾಡಲು ಹಕ್ಕು ಇರಲಿಲ್ಲ ಎನ್ನುವುದು ಸುಳ್ಳು. ಅದೇ ರೀತಿ ನಮ್ಮ ತಂದೆ ಕೆಂಪೆಗೌಡ ನನಗೆ 2004 ರಲ್ಲಿ ದಾನ ಪತ್ರ ಮಾಡಿಕೊಡಲು ಹಕ್ಕು ಇರಲಿಲ್ಲ ಎನ್ನುವುದು ಸುಳ್ಳು. ಅರ್ಜಿದಾರ ಎಸ್.ಎಲ್.ಎ.ಒ ಇವರು ದಿನಾಂಕ 23.09.2016 ರಂದು ಗೆಜೆಟ್ ನೋಟಿಫಿಕೇಷನ್

ಮಾಡಿದ್ದಾರೆ ಎನ್ನುವುದು ನಿಜ. 2016 ರಲ್ಲಿ ಮಾಡಿದ ಪೇಪರ್ ಪ್ರಕಟಣೆಯಲ್ಲಿ, ಗೆಜೆಟ್ ನಲ್ಲಿ ಸೈಟ್ ನಂ.98 ರಲ್ಲಿ ಸ್ವಾಧೀನ ಪಡಿಸಿಕೊಂಡ ಬಗ್ಗೆ ಬರೆದಿದ್ದಾರೆ. ಅಂತ ದಾಖಲೆ ನಮ್ಮ ಹತ್ತಿರ ಇವೆ. ಸರ್ವೆ ನಂ.131 ಕ್ಕೆ ಸಂಬಂಧಿಸಿದ ಯಾವುದೇ ಭಾಗದ ಆಸ್ತಿಯಲ್ಲಿ ನನಗೆ ಪರಿಹಾರ ಹಣ ಬರುವುದಿಲ್ಲ ಎನ್ನುವುದು ಸುಳ್ಳು.

**ಉಳಿದ ಎದುರುದಾರರು ಇರುವುದಿಲ್ಲ. ಅದೇ ರೀತಿ ಉಳಿದ ಎದುರುದಾರ ವಕೀಲರು ಕೂಡ ಇರುವುದಿಲ್ಲ. ಹೀಗಾಗಿ ಉಳಿದ ಎಲ್ಲಾ ಎದುರುದಾರರ ಪರವಾಗಿ ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.